**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಲಯ**
ಕನಕಪುರ

**ಸಿ. ಸಿ. : 1435/2022**

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

1. ಲೇಪಾಕ್ಷಿ ರೆಡ್ಡಿ
   ಬಿನ್ ಮಲ್ಲರೆಡ್ಡಿ
   ವಯಸ್ಸು 52 ವರ್ಷಗಳು,

2. ಅನುಜ್ ಕುಮಾರ್ ಬಿನ್ ಲೇಪಾಕ್ಷಿ ರೆಡ್ಡಿ
   ವಯಸ್ಸು 20 ವರ್ಷಗಳು,

3. ಮನೋಜ್ ಕುಮಾರ್ ಬಿನ್ ಲೇಪಾಕ್ಷಿ ರೆಡ್ಡಿ
   ವಯಸ್ಸು 23 ವರ್ಷಗಳು,

4. ಗುರುಪ್ರಸನ್ನ
   ಬಿನ್ ಮಲ್ಲೇಶ್ ರೆಡ್ಡಿ
   ವಯಸ್ಸು 28 ವರ್ಷಗಳು,

   ಮೇಲ್ಕಂಡ ಆರೋಪಿತರ ವಾಸಃ
   ಮುಡೇನಹಳ್ಳಿ ಗ್ರಾಮ
   ಹಾರೋಹಳ್ಳಿ ಹೋಬಳಿ
   ಕನಕಪುರ ತಾಲ್ಲೂಕು

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

**ದಿನಾಂಕ.01.01.2022 ರಂದು ಬೆಳಿಗ್ಗೆ ಸುಮಾರು 9:00 ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮುಡೇನಹಳ್ಳಿ ಗ್ರಾಮದ ಚಾಸಾ-1 ಜಯರಾಮ ರೆಡ್ಡಿ ರವರ ಬಾಬ್ತು ಸರ್ವೆ ನಂ.162/4 ರ ಜಮೀನಿನಲ್ಲಿ 1 ರಿಂದ 4 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡುವ ಮೂಲಕ**

ಭಾರತ ದಂಡ ಸಂಹಿತೆ ಕಲಂ 447 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ರಿಂದ 4 ನೇ ಆರೋಪಿಗಳಾದ ನೀವುಗಳು ಚಾಸಾ-1 ರವರು ಜೆಸಿಬಿಯಿಂದ ಕೆಲಸ ಮಾಡಿಸುತ್ತಿದ್ದಾಗ ಕೆಲಸ ತಡೆಯುವ ಮೂಲಕ ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ರಿಂದ 4 ನೇ ಆರೋಪಿಗಳಾದ ನೀವುಗಳು ಚಾಸಾ-1 ರವರಿಗೆ ಸೂಳೆಮಗನೇ, ಬೋಳಿಮಗನೇ ಎಂದು ಅವಾಚ್ಯ ಶಬ್ಧಗಳಿಂದ ಬೈಯುವ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ರಿಂದ 4 ನೇ ಆರೋಪಿಗಳಾದ ನೀವುಗಳು ಚಾಸಾ-1 ರವರನ್ನು ಕೈಗಳಿಂದ ತಳ್ಳಿ ಕೆಳಕ್ಕೆ ಬಿಳಿಸಿ ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ಮತ್ತು 2 ನೇ ಆರೋಪಿಗಳಾದ ನೀವುಗಳು ದೊಣ್ಣೆಗಳಿಂದ ಚಾಸಾ-1 ರವರಿಗೆ ಹೊಡೆದಿದ್ದು, 3 ಮತ್ತು 4 ನೇ ಆರೋಪಿಗಳಾದ ನೀವುಗಳು ಕಲ್ಲುಗಳಿಂದ ಚಾಸಾ-1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕನಕಪುರ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ.**
**ಸಿ.ಸಿ. ನಂ.**1435/2022

ಹಾರೋಹಳ್ಳಿ ಪೊಲೀಸ್ ಠಾಣೆ ವಿರುದ್ದ

1. ಲೇಪಾಕ್ಷಿ ರೆಡ್ಡಿ
   ಬಿನ್ ಮಲ್ಲರೆಡ್ಡಿ

2. ಅನುಜ್ ಕುಮಾರ್
   ಬಿನ್ ಲೇಪಾಕ್ಷಿ ರೆಡ್ಡಿ

3. ಮನೋಜ್ ಕುಮಾರ್
   ಬಿನ್ ಲೇಪಾಕ್ಷಿ ರೆಡ್ಡಿ

4. ಗುರುಪ್ರಸನ್ನ
   ಬಿನ್ ಮಲ್ಲೇಶ್ ರೆಡ್ಡಿ

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

   ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

   ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಕನಕಪುರ

ಆರೋಪಿತರ ಸಹಿ

1.

2.

3.

4.